ಸೃಜನಿ

**SRUJANI: Indian Journal of Innovative Research and Development (SIJIRD)**
Volume-2 Issue 3, July-August 2023, Pp. 6-11
Bi-Monthly, Peer-Reviewed, Open Access, Indexed Journal

**I S S N: 2583-3510**
**SIRDF JOURNALS**
editor@srujani.in
www.srujani.in

# ನೇಮಿಚಂದ್ರರ 'ಪೆರುವಿನ ಪವಿತ್ರ ಕಣಿವೆಯಲ್ಲಿ'

**ಕಲಾವತಿ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವರ್ತೂರು, ಬೆಂಗಳೂರು.

**Abstract:**

*'ಬದುಕು ಬದಲಿಸಬಹುದು' ಕೃತಿಯಿಂದ ಲೇಖಕಿ ನೇಮಿಚಂದ್ರರವರು ಇಡೀ ನಾಡಿಗೆ ಚಿರಪರಿಚಿತರು. ಸಾಮಾಜಿಕ ಕಳಕಳಿಯುಳ್ಳ ಮನೋಭಾವನೆಗಳಿಂದ ತಮ್ಮದೇ ಆದ ಕಥೆ, ಕಾದಂಬರಿ, ಬಿಡಿ ಲೇಖನಗಳು ಮತ್ತು ಅಂಕಣಗಳ ಮೂಲಕ ಇಡೀ ಸಾಹಿತ್ಯ ವಲಯದಲ್ಲಿ ಹೆಸರು ಗಳಿಸಿಕೊಂಡವರು. ಮೂಲತಃ ಇಂಜಿನಿಯರ್ ಆದರೂ ಸಾಹಿತ್ಯದ ಗೀಳು ಹಚ್ಚಿಕೊಂಡಿದ್ದು ಅಸಾಧಾರಣೀಯ ಸಾಧನೆ. ಇವರು ಬರೆದಿರುವ ಹಲವಾರು ಕೃತಿಗಳು ಇಂದಿಗೂ ಸಾರಸ್ವತ ಲೋಕದಲ್ಲಿ ಹೆಗ್ಗುರುತು ಪಡೆದುಕೊಂಡಿವೆ. ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಶಾಂತ ರೀತಿಯ ಮೌನ ಮನಸ್ಸಿನಲ್ಲಿ ಎಲ್ಲರನ್ನು ಬೆರೆತು ಮತ್ತು ಬೆಸೆಯುವಂತಹ ಸಾಹಿತ್ಯದ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ. ಪ್ರಸ್ತುತ ಲೇಖನದಲ್ಲಿ ನೇಮಿಚಂದ್ರರ 'ಪೆರುವಿನ ಪವಿತ್ರ ಕಣಿವೆಯಲ್ಲಿ' ಕೃತಿ ಕುರಿತು ವಿಶ್ಲೇಷಿಸಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ನೇಮಿಚಂದ್ರ, ಪೆರುವಿನ ಪವಿತ್ರ ಕಣಿವೆಯಲ್ಲಿ, ಪ್ರವಾಸ ಕಥನ.*

**ಪೀಠಿಕೆ**

ನೋವಿಗದ್ದಿದ ಕುಂಚ, ದುಡಿವ ಹಾದಿಯಲಿ ಜೊತೆಯಾಗಿ, ಕಾಲುಹಾದಿಯ ಕೋಲ್ಮಿಂಚುಗಳು, ಮಹಿಳಾ ವಿಜ್ಞಾನಿಗಳು, ಹೋರಾಟದ ಹಾದಿಯಲ್ಲಿ ಧೀಮಂತ ಮಹಿಳೆಯರು ಮುಂತಾದ ಕೃತಿಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿರುವವರು ಪ್ರಸಿದ್ಧ ಲೇಖಕಿ ನೇಮಿಚಂದ್ರ. ಅವರ ಬದುಕಿನ ಆಗು ಹೋಗುಗಳಲ್ಲಿ ಹೆಚ್ಚಾಗಿ ಅನುಭವಿಸಿದ್ದು ದೇಶ ಸುತ್ತು ಕೋಶ ಓದು ಎಂಬ ವ್ಯಾಖ್ಯಾನದಿಂದ. ಕಾರಣ ನೇಮಿಚಂದ್ರರವರು ತಮ್ಮದೇ ಆದ ವೈಯುಕ್ತಿಕ ಬದುಕಿನಲ್ಲಿ ಓದಿದ್ದು ಇಂಜಿನಿಯರ್ ಆದರೂ ಇಡೀ ಕಾಯಕದೊಂದಿಗೆ ಪ್ರವೃತ್ತಿಯಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಅವರ ಸಾಧನೆ ಬಹುದೊಡ್ಡದು ಎಂಬ ಭಾವನೆ ನಮ್ಮದು. ತಮ್ಮ ಅರ್ಧ ಬದುಕನ್ನೇ ದೇಶಗಳನ್ನು ಸುತ್ತಿ ಅಲ್ಲಿಯ ಸಂಸ್ಕೃತಿ, ಪರಿಸರ, ಮುಂತಾದ ಸೃಜನಶೀಲತೆಗಳನ್ನು ತಿಳಿದುಕೊಂಡಂತಹ ದೊಡ್ಡ ಚಿಂತಕಿ ಎಂದು ಹೇಳಬಹುದು. ಇತರರ ಬಗ್ಗೆ ಆಲೋಚನೆಯೇ ಒಂದು ರೀತಿಯಲ್ಲಿ ಸಮಾಜಸೇವೆಯೆಂದು ಭಾವಿಸುತ್ತಾ, ಹೋದ ಕಡೆಯಲೆಲ್ಲ ಜನರ ಜೀವನ, ಸಮಾಜ ಮತ್ತು ಸಮುದಾಯದ ಬಗ್ಗೆ ಚಿಂತಿಸುತ್ತ ಅಲ್ಲಿದ್ದ ವಾಸ್ತವ ಸ್ಥಿತಿಯನ್ನು ಬರೆಯುವುದೆಂದರೆ ಅಷ್ಟು ಸುಲಭದ ಕೆಲಸವಲ್ಲ ಆದರೆ ಅಂತಹ ಸಾಧನೆ ಮಾಡಿದ್ದು ನೇಮಿಚಂದ್ರರವರು. ಹೀಗೆ ಸರ್ಕಾರಿ ಅಧಿಕಾರಿಯಾಗಿ ಬದುಕಿನ ಒಂದು ಭಾಗವಾಗಿ ಪ್ರವಾಸ ಕಥನಗಳನ್ನು ಬರೆಯುತ್ತಿರುವ ರೂಢಿ ಮಾಡಿಕೊಂಡಿರುವುದು ಸೋಜಿಗದ ವಿಷಯ.

***Please cite this article as:*** ಕಲಾವತಿ. (2023). ನೇಮಿಚಂದ್ರರ 'ಪೆರುವಿನ ಪವಿತ್ರ ಕಣಿವೆಯಲ್ಲಿ'. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(3), 6–11.

ನನ್ನ ಕನಸುಗಳಿಗೆ ಎಂಥಾ ಅದ್ಭುತ ಶಕ್ತಿ ಇದೆ, ಕನಸು ಕಾಣಬೇಕಷ್ಟೆ, ಹಾರಲು ರೆಕ್ಕೆಗಳು ಮೊಳೆಯುತ್ತವೆ. ಆರಂಭವಷ್ಟೆ ಕಷ್ಟ, ಮೊದಲ ಹೆಜ್ಜೆ ಇಟ್ಟಂತೆ ಹಾದಿ ಸುಗಮ ಹೀಗೆ ವಾಸ್ತವ ಚಿತ್ರಣವನ್ನು ಕಥೆಗಳ ಮೂಲಕ ಜನರನ್ನು ಜಾಗೃತಿಗೊಳಿಸವತ್ತ ಪ್ರಮುಖ ಪಾತ್ರ ವಹಿಸುವ ಮತ್ತು ಕಥೆಗಳನ್ನು ಬರೆಯುವ ಅವರ ಕಾರ್ಯ ವೈಖರಿ ಅತ್ಯದ್ಭುತವೆಂದು ಹೇಳಬಹುದು. ಅಲೆಮಾರಿ ಲೇಖಕಿಯಾಗಿ ಇಡೀ ನಾಡನ್ನು, ಬೇರೆ ಬೇರೆ ದೇಶಗಳನ್ನು ಸುತ್ತಿದ ಜಂಗಮನ ಅರಿವಿನ ಪ್ರಜ್ಞೆಯನ್ನು ಬೆಳೆಸಿಕೊಂಡ ನೇಮಿಚಂದ್ರರವರು ತಮ್ಮ ಜೀವನದಲ್ಲಿ ಓಡಾಡಿದ, ದೇಶಗಳನ್ನು ಸುತ್ತಿದ ಅನುಭವಗಳನ್ನು ಇಲ್ಲಿ ಅಕ್ಷರಗಳ ಮೂಲಕ ಕೃತಿಯಾಗಿ ಎಲ್ಲರನ್ನು ಗಮನ ಸೆಳೆಯುತ್ತಿರುವುದು ಅಷ್ಟೇ ಸಂತೋಷದ ವಿಷಯ. ಮತ್ತು ಭಾಷಾ ವೈವಿಧ್ಯವು ಕೂಡ ಅವರಲ್ಲಿ ಪ್ರಬುದ್ಧತೆಯನ್ನು ಕಂಡುಕೊಂಡಿದೆ. ತಾವು ಸುತ್ತಿದ ದೇಶದ ಪ್ರತಿಕ್ಷಣದ ಅನುಭವಗಳನ್ನು ನಮ್ಮ ಬೌದ್ಧಿಕ ಶಕ್ತಿಗೆ ನಿಲುಕದ ಭಾಷಾ ಸಂಪತ್ತನ್ನು ನೀಡಿರುವುದು ಅವಿಸ್ಮರಣೀಯವೇ ಸರಿ ಎಂದು ಹೇಳಬಹುದು. ಹಾಗಾಗಿ ಅವರ ಒಂದು ಹವ್ಯಾಸಿಯಾಗಿ ಪ್ರವಾಸವನ್ನು ಕೈಗೊಳ್ಳುವುದು ಅವರ ಮಹತ್ವಾಕಾಂಕ್ಷೆಯೆಂದು ನಾನು ಭಾವಿಸುತ್ತೇನೆ. ಹಾಗಾಗಿ ಒಂದು ದೇಶದ ಪ್ರಕೃತಿ ಸಂಸ್ಕೃತಿಯನ್ನು ಸೂಕ್ಷ್ಮಾತೀಸೂಕ್ಷ್ಮಗಳನ್ನು ತಿಳಿಸಿದಂತಹ ಏಕೈಕ ಲೇಖಕಿ ಎಂದೇ ನಾನು ಭಾವಿಸುತ್ತೇನೆ.

ನೇಮಿಚಂದ್ರರ ಅನೇಕ ಪ್ರವಾಸ ಕಥನಗಳಲ್ಲಿ ಈಜಿಪ್ತ್ ದೇಶದ ಪೆರು ಕಣಿವೆಯ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿ ಪರಿಚಯ ಮಾಡಲು ಹೊರಟಿರುವ ಅವರ ಸಾಧನೆ ಹೇಳತೀರದು. ಅವರ ಶಬ್ಧಸಂಪತ್ತು ಕೂಡ ಓದದೇ ಆಗದ, ಅರ್ಥೈಸಲಾರದಷ್ಟು ಕಠಿಣವಾಗಿದೆ ಎಂದು ನನ್ನ ಅನಿಸಿಕೆ. ಅವರನ್ನು ಅರ್ಥಮಾಡಿಕೊಳ್ಳುವುದು ತುಂಬಾನೇ ಕಷ್ಟ ಎಂದು ಆಲೋಚಿಸಬಹುದು. ಹೀಗೆ ಬೇರೆ ದೇಶದಲ್ಲಿ ಭಾಷೆಯನ್ನು ಕಲಿಯುವುದು, ಆಲೋಚಿಸುವುದು, ಸಂಭಾಷಣೆ ಮಾಡಿರುವುದು ಲೇಖಕಿಯ ಧೈರ್ಯ, ಛಲವೆಂದೇ ನಾನು ನಂಬುತ್ತೇನೆ. ಅಲ್ಲಿಯ ಭಾಷಾ ಸಮಸ್ಯೆಯನ್ನು ಸಂಕೇತಗಳ ಮೂಲಕ ಕಲಿತುಕೊಂಡು ಅಲ್ಲಿಯ ಎಲ್ಲಾ ಸಂಸ್ಕೃತಿಯ ಪರಿಚಯವನ್ನು ಇಡೀ ಕರ್ನಾಟದ ಜನರಿಗೆ ಕೊಟ್ಟಂತಹ ಒಬ್ಬ ಆತ್ಮಸ್ಥೈರ್ಯದ ಮಹಿಳೆ ಎಂದು ನಾನು ತಿಳಿಯುತ್ತೇನೆ.

ಈಜಿಪ್ತ್ ದೇಶದ ಪೆರು ಕಣಿವೆಗೆಂದು ಹೊರಟ ನೇಮಿಚಂದ್ರ ಪರವಾನಗಿ ಇಲ್ಲದಿದ್ದರೂ ಅಕ್ಕಪಕ್ಕದ ದೇಶಗಳಲ್ಲೂ ಸುಳಿದಾಡಿ, ಪ್ರವಾಸ ಹೋದಾಗ ಎದುರಾಗುವ ಭಾಷೆಯ ಸಮಸ್ಯೆಯನ್ನು ತಮ್ಮದೇ ಕೈ ಸನ್ನೆಗಳ ಮೂಲಕ ನಿಭಾಯಿಸಿಕೊಂಡು, ಅದೇ ರೀತಿ ಆಹಾರದ ಪ್ರಶ್ನೆಯನ್ನು ಬಗೆಹರಿಸಿಕೊಂಡು, ಹೋದ ಕಡೆ ನಮ್ಮ ಊರಿನದೇ ಪರಿಸ್ಥಿತಿಯನ್ನು, ನಮ್ಮ ಜನರಂತೆಯೇ ಆಧರಿಸುವ, ಪ್ರೀತಿಸುವ, ಸ್ನೇಹಭಾವ ತೋರಿಸುವ ಜನರನ್ನು ಭೇಟಿ ಮಾಡಿದ ಅನುಭವಗಳನ್ನು ಲೇಖಕಿ ಇಲ್ಲಿ ಸ್ವಾರಸ್ಯಕರವಾಗಿ ವರ್ಣಿಸಿದ್ದಾರೆ. ಕನಸುಗಾರ್ತಿ ಗೆಳತಿಯ ಜೊತೆಗೂಡಿ ಬೆಟ್ಟವೇರಿ, ಕಣಿವೆ ಇಳಿದು, ಅಮೆಜಾನ್ ನದಿಯಲ್ಲಿ ರಾತ್ರಿ ದೋಣಿ ಪಯಣ ಮಾಡಿದ ರೋಮಾಂಚಕ ಸನ್ನಿವೇಶಗಳನ್ನು, ಮಹಿಳೆಯ ಅಪೂರ್ವ ಸಾಧನೆಯನ್ನು ದಾಖಲಿಸುವ ಕೃತಿಯೆಂದು ನಂಬಿದ್ದೇನೆ. ಹೀಗೆ ಅವರ ವೃತ್ತಿ ಬದುಕಿನ ನಡುವೆ ತಮ್ಮದೇ ಆದ ವೈಖರಿಯನ್ನು ಹೊಂದಿರುತ್ತಾರೆ.

ಪೆರುವಿನ ಸುತ್ತಮುತ್ತಲಿನ ಅನೇಕ ಸೂಕ್ಷ್ಮಾತಿಸೂಕ್ಷ್ಮ ವಸ್ತುಗಳನ್ನು, ಪ್ರಾಣಿಗಳನ್ನು, ಅಲ್ಲಿನ ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯಗಳನ್ನು, ಜನರ ಜೀವನವನ್ನು, ಅವರ ಆಹಾರ ಪದ್ಧತಿಯನ್ನು, ವ್ಯವಸಾಯ, ಹೀಗೆ ಅವರ ಬದುಕೇ ಒಂದು ರೀತಿಯಲ್ಲಿ ವಿಚಿತ್ರವಾದದ್ದು ಮತ್ತು ಅಷ್ಟೇ ಆ ಕಾಡಿನ ಮಧ್ಯೆ ಅವರ ಬದುಕು ಒಂದು ರೀತಿಯ ಅನಾಗರಿಕತೆಗೆ ಕನ್ನಡಿ ಹಿಡಿಯುತ್ತದೆಂದು ನನ್ನ

ಅನಿಸಿಕೆ. ಪೆರುವಿನ ಮಧ್ಯೆ ಗೆಳೆಯತಿಯೊಂದಿಗೆ ಓಡಾಡುತ್ತ ಮೊದಲೇ ಈಜಿಪ್ಟ್‌ನಲ್ಲಿ ಇರುವ ನಾಡದು ಪೆರು ಹಾಗಾಗಿ ಪಳಿಯುಳಿಕೆಗಳು, ಉತ್ಖನನಗಳನ್ನು ಕೂಡ ಕವಯಿತ್ರಿ ಪರಿಚಯಿಸಿದ್ದಾಳೆ.

ಲೇಖಕಿ ತಮ್ಮ ಕೃತಿಯಲ್ಲಿ ಬೆಂಗಳೂರಿನಿಂದ ಪೆರುವಿನ ಕಡೆಗೆ ವಿಮಾನ ಪಯಣದ ಅನುಭವವನ್ನು ಹೇಳುತ್ತಾರೆ. ಆ ನೆಲದಲ್ಲಿ ಬಂದು ಇಳಿದ ಮೇಲೆ ಉತ್ಖನನ ನೆಲವಾದ ಈಜಿಪ್ಟ್‌ನ ಒಂದು ಪ್ರದೇಶವಾದ ಪೆರುವಿನಲ್ಲಿ ಕೆಲವೊಂದು ಪ್ರಾಚೀನವಾದ ಪುರಾವೆಗಳ ಪಳೆಯುಳಿಕೆಗಳು ಕಾಣುತ್ತಾ ಅವುಗಳ ಬಗ್ಗೆ ತಿಳಿಸಿಕೊಡುತ್ತಾರೆ. ಪೆರುವಿನ ನೆಲದಲ್ಲಿ ಮಹಿಳಾ ಹೋರಾಟಗಳು ಕೂಡ ಒಳಪುಟಗಳಲ್ಲಿ ಕಾಣುತ್ತೇವೆ. ಅವರ ಮೂಲಕ ಕ್ರಾಂತಿಯಾದ ಘಟನೆಗಳು ನಂತರದಲ್ಲಿ ಹೊಸ ಬದಲಾವಣೆ, ಜಾಗೃತಿಯಾದಂತಹ ಆಡಳಿತದ ರೋಚಕ ಘಟ್ಟವಾದ ಮಹಿಳಾ ಚುನಾವಣೆಗಳಲ್ಲಿ ಹೆಣ್ಣು ಮಕ್ಕಳು ಭಾಗವಹಿಸಿ ಚುನಾವಣೆಯಲ್ಲಿ ಗೆದ್ದು ಬಂದು ಆಡಳಿತದ ಚುಕ್ಕಾಣಿ ಹಿಡಿದು ಸರ್ಕಾರ ರಚನೆ ಮಾಡುವಂತಹ ಅನೇಕ ಈತರಹ ವಿಷಯಗಳನ್ನು ಮನಃ ಮುಟ್ಟುವಂತೆ ಕೃತಿಯಲ್ಲಿ ತಿಳಿಸಿಕೊಡುತ್ತಾರೆ. ಇನ್ನೂ ಕೃತಿಯಾಳಗೆ ಮರುಭೂಮಿಯ ನಗರವಾದ ನಾಸ್ಕಾ, ಚೌಚೀಲಾ–ಸಮಾಧಿಗಳ ನಗರಗಳ ನಡುವೆ ಅವರ ಓಡಾಡದ ಕುತೂಹಲ, ಮರುಭೂಮಿಯ ದೈತ್ಯ ಚಿತ್ರಗಳು, ನಾಸ್ಕಾ ಗೆರೆಗಳ ಮೇಲೆ, ಜ್ವಾಲಾಮುಖಿಯ ನಡುವೆ ಅನುಭವಗಳು, ಇನ್ಕಾ ಸಾಮ್ರಾಜ್ಯದ ನಾಭಿಕೇಂದ್ರವಾದ ಕುಸ್ಕೋರವರ ಆಡಳಿತದ ಜೀವನ, ಓಲಂತಾಯ್ ತೋಂಬೋದ ಸೂರ್ಯ ದೇವಾ;ಲಯ, ರಕ್ತದಲ್ಲಿ ಬರೆದ ಚರಿತ್ರೆಯ ಒಂದು ಇತಿಹಾಸ ಪ್ರಸಿದ್ಧ ಘಟನೆಯನ್ನು ತಿಳಿಸಿಕೊಡುತ್ತಾರೆ, ಮಾಚುಪಿಚುವಿನ ಪ್ರದೇಶದ ಎತ್ತರದ ಆ ಸ್ಥಳವನ್ನು ಪರಿಚಯ ಮಾಡಿಕೊಡುತ್ತಾರೆ. ನೀರಿನ ಪ್ರಪಾತಕ್ಕೆ ಸಿಕ್ಕು ನಾಶವಾದ ಇನ್ಕಾ ನಗರದ ವಸ್ತುಸ್ಥಿತಿಗಳನ್ನು ನಮ್ಮುಂದೆ ಕಣ್ಣಿಗೆ ಕಟ್ಟುವಂತೆ ಹೇಳುತ್ತಾರೆ. ವಿಶ್ವದ ಅತಿದೊಡ್ಡ ನದಿ ಅಮೇಜಾನ್ ನನ್ನು ಕುರಿತು ಅವರಿಗಾದ ಹೊಸ ಅನುಭವವನ್ನು ಹಂಚಿಕೊಳ್ಳುತ್ತಾರೆ. ಪಕ್ಕದಲ್ಲಿರುವ ಬ್ರೆಜಿಲ್ ಪ್ರದೇಶವನ್ನು ಪ್ರವೇಶಿಸಿ ಅಲ್ಲಿರುವ ಸಂಸ್ಕೃತಿಯ ವಿಚಾರಲಹರಿಯನ್ನು ಹರಿಸುತ್ತ ಹೇಳುತ್ತಾ ಸಾಗುತ್ತಾರೆ. ವಿಕ್ಟೋರಿಯಾ ಅಮೆಜಾನಿಕಾ ಪ್ರದೇಶದಲ್ಲಿ ತಮ್ಮ ಕೊನೆಯ ದಿನಗಳನ್ನು ಕಳೆಯುತ್ತಾರೆ ನಂತರದಲ್ಲಿ ಕೊನೆಯ ದಿನ ಮತ್ತು ಕೊನೆಯ ಅಧ್ಯಾಯವಾದ ಹೋಗಿ ಬರುವೆ ಪೆರುವನ್ನು ಕುರಿತು ಅವಿನಾಭಾವ ಸಂಬಂಧವನ್ನು ಜೀವನದಲ್ಲಿ ಅಚ್ಚಳಿಯದಂತೆ ಉಳಿಸಿಕೊಳ್ಳುವ ಪ್ರವಾಸತಾಣವಾಗಿ ಅವರು ಇಡೀ ನಾಡಿನ ಹಾಗೂ ಪ್ರಪಂಚಕ್ಕೆ ಪರಿಚಯಿಸುವ ಕಾರ್ಯವನ್ನು ಮಾಡಿದ್ದು ಅತ್ಯದ್ಭುತವಾದ ಸಾಧನೆಯೆಂದು ಹೇಳಬಹುದು.

ಮೊದಲ ದಿನದ ಅಧ್ಯಯನದಲ್ಲಿ ತಮ್ಮ ಪ್ರಯಣದ ಮೂಲಕ ಮೊದಲ ದೇಶ ಅಮೇರಿಕವನ್ನು ನೆನೆಪಿಸುತ್ತಾ ಹಣದ ಬದುಕಿನ ಪರಿಯನ್ನು ಬಳಸಿ ಬಿಸಾಕುವ ಸಂಸ್ಕೃತಿಯನ್ನು ಕುರಿತು ತಿಳಿಸುತ್ತಾ ಪುಸ್ತಕವನ್ನು ಬರೆಯಲು ಪ್ರಾರಂಭಿಸುತ್ತಾರೆ. ಪಯಣದ ಅರ್ಧಭಾಗದಲ್ಲಿ 'ಚಾರಿಯಟ್ ಆಫ್ ದಿ ಗಾಡ್' ಪೆರುವಿನ ಮರುಭೂಮಿಯಲ್ಲಿ ಹರಡಿ ನಿಂತ ರಹಸ್ಯಮಯ ದೈತ್ಯ ಚಿತ್ರಗಳ ಬಗ್ಗೆ ಕುತೂಹಲ ಮೂಡಿಸುತ್ತಾರೆ. ನ್ಯಾಷನಲ್ ಜಿಯಾಗ್ರಫಿಯಲ್ಲಿ ಕಂಡ ಆಂಡೀಸ್ ಪರ್ವತ ಶಿಖರಗಳನ್ನು ನೋಡುತ್ತಾ ಹಾಗೂ ಇನ್ಕಾ ನಗರವನ್ನು ಕುರಿತು ಬಹಳ ಸೂಕ್ಷ್ಮವಾಗಿ ತಿಳುಸುತ್ತಾ, ಅಮೆಜಾನ್ ನದಿಯ ಮೇಲೆ ವಿಮಾನ ಪಯಣವನ್ನು ನೆನಪಿಸುತ್ತ, ಕೆಲವೊಂದು ಕೃತಿಗಳನ್ನು ಓದುತ್ತಾ ರಾತ್ರಿಗಳನ್ನು ಮೆಲುಕು ಹಾಕುತ್ತ ಪೆರುವಿನ ಕಡೆಗೆ ಹೆಜ್ಜೆ ಹಾಕುತ್ತಾರೆ. ಲೇಖಕಿ ನೇಮಿಚಂದ್ರರವರು ವಿಜ್ಞಾನಿಗಳನ್ನು ಹುಡುಕಿ ಹೊರಟ ನನ್ನ ಮೊದಲ ಕನಸಿನ ಪಯಣವೆಂದು ಹೇಳಿಕೊಳ್ಳುತ್ತಾರೆ. ಗೆಳತಿ ಹೇಮಲತಾರವರೊಂದಿಗೆ ಕಂಡಕ್ಟೆಡ್ ಟೂರ್ ಪ್ರಾರಂಭಿಸುವ ಲೇಖಕಿಯರು ಸಾಹಿತ್ಯ, ವಿಜ್ಞಾನ,

ಮಹಿಳಾ ವಿಷಯಗಳನ್ನು ಅಧ್ಯಯನ ಮಾಡುತ್ತಾ ಸಾಗುತ್ತಾರೆ. ಹಾಗೆಯೇ ಸಾಗುತ್ತ ಹಿಂದಿನ ಪ್ರವಾಸದ ದಿನಗಳನ್ನು ಸ್ಮೃತಿಗೆ ತರುತ್ತಾರೆ ಮೇರಿಕ್ಯೂರಿಯ ಪ್ರಯೋಗ, ಬ್ರಾಂಟೆಯ ಮೂರ್, ಪ್ರಥಮ ಸ್ತ್ರೀವಾದಿ ಲೇಖಕಿ ಆಫ್ರಾಳ ಹಳ್ಳಿ, ಖಗೋಳ ಶಾಸ್ತ್ರಜ್ಞೆ ಕ್ಯಾರೋಲಿನ್ ಹರ್ಷಲ್‌ಳ ತಾಣ, ಕೀಟ್ಸ್‌ನ ಕಾವ್ಯ ರಾತ್ರಿಗಳು, ಹ್ಯಾಂಪ್ ಸ್ಟೆಡ್‌ಹೀತ್‌ನ ಮನೆಯನ್ನು, ಕೊನೆಯಿಸಿರೆಳೆದ ರೋಮಿನ ಆ ಏಕಾಂತದ ಕೋಣೆಯನ್ನು, ಫ್ಲಾರೆನ್ಸ್ ನೈಟಿಂಗೇಲಳ ಆಸ್ಪತ್ರೆ, ಕುಸಿದ ಬರ್ಲಿನ್ ಗೋಡೆಯನ್ನು, ಡಕಾವ್ ನಾಜಿ ಕ್ಯಾಂಪನ್ನು, ಆನ್ ಫ್ರಾಂಕ್ ಅವಿತಿದ್ದ ಗುಪ್ತಗೃಹವನ್ನು, ಸಾಪೇಕ್ಷತಾವಾದ ರೂಪುಗೊಂಡ ಐನ್‌ಸ್ಟೈನ್ ಅವರ ತಾಣವನ್ನು, ವ್ಯಾನ್‌ಗೋನ ಬಿಸಿಲು ಹಳದಿ ಸೂರ್ಯಕಾಂತಿಗಳನ್ನು ಕಂಡುಕೊಂಡಂತಹ ಮುಂತಾದ ಹಿಂದಿನ ಪ್ರವಾಸದ ದಿನದ ಅನುಭವದ ಮೂಟೆಗಳನ್ನು ಇಲ್ಲಿ ಪಸರಿಸುತ್ತಾರೆ ಲೇಖಕಿ ನೇಮಿಚಂದ್ರರವರು. ಹಾಗೂ ಪೆರುವಿನ ಮುಂಚೆ ಇನ್ಕಾ ಸಂಸ್ಕೃತಿಯ ವಿಶಿಷ್ಟ ಸಂಪ್ರದಾಯವನ್ನು, ಮಹಿಳೆಯ ಸೌಂದರ್ಯ ಸೂಕ್ಷ್ಮತೆಗಳನ್ನು, ಸಮಾಧಿಗಳಲ್ಲಿ ಮಮ್ಮಿಗೆ ತೊಡಸಿದ ಚಿನ್ನದ ಮುಖವಾಡ ಹಾಗೂ ಜೋಡಿಸಿದ ಬಂಗಾರದ ಕೈಗಳು, ಧಾರ್ಮಿಕ ಸಮಾರಂಭಗಳಲ್ಲಿ ಬಳಸುತ್ತಿದ್ದ ಮೆಚ್ಚಿನ ಬಗೆಯ ಆಯುಧ, ಪೆರು ನೆಲದ ಪ್ರಾಣಿ ಲಾಮಾ, ಪೆರುವಿನ ಕಣಿವೆಗಳಲ್ಲಿ ಕಾಣುವ ಪುರಾತನ ಶಿಥಿಲ ನಗರಗಳನ್ನು, ಆಂಡೀಸ್ ಪರ್ವತ ಶಿಖರಗಳ ಎತ್ತರದಲ್ಲಿ ಮುಂತಾದ ನೋಡಿದ ದೃಶ್ಯಗಳ ಅನುಭವಗಳನ್ನು ಲೇಖಕಿ ಇಲ್ಲಿ ಹಂಚಿಕೊಳ್ಳುತ್ತಾರೆ.

ದಕ್ಷಿಣ ಅಮೇರಿಕಾದ ಆಂಡೀಸ್ ಪರ್ವತಗಳ ಮೂಲಕ ಲೀಮಾ ಪ್ರದೇಶದಿಂದ ನಾಸ್ಕಾಗೆ ತೆರಳಿ ಇನ್ಕಾ ಸಾಮ್ರಾಜ್ಯದ ರಾಜಧಾನಿ ಕುಸ್ಕೋದಿಂದ ಪೆರುವಿನ ಕಡೆಗೆ ಪಯಣಿಸುತ್ತ, ಬಡತನದ ಬದುಕಿನಲ್ಲೂ ಮುಖದ ತುಂಬ ನಗುವನ್ನು ಚೆಲ್ಲುವ ಜನರ ಜೀವನವನ್ನು ಕಾಣುತ್ತಾರೆ. ಅವರ ಸಂಸ್ಕೃತಿಯಾದ ಅಭಿನಯಿಸುವ ವಿಶಿಷ್ಟ ಪಾತ್ರದಾರಿಗಳನ್ನು ಇಲ್ಲಿ ಪರಿಚಯಿಸುತ್ತಾರೆ. ಇನ್ಕಾ ಗೋಡೆಗಳ ಮೇಲೆ ಎದ್ದುನಿಂತ ಸ್ಪಾನಿಷ್ ಚರ್ಚುಗಳು, ಉತ್ಖನನ ತಾಣವಾದ ಹೊಕ ಪುಕ್ಲಾನ್ 1800 ವರ್ಷಗಳಷ್ಟು ಹಿಂದಿನ ಪಿರಮಿಡ್ ಪರಿಚಯ ಮಾಡಿಕೊಡುತ್ತಾರೆ. ದಕ್ಷಿಣ ಅಮೇರಿಕಾದ ಗುಲಾಮತನವನ್ನು ನೆನಪಿಸುತ್ತಾ ಬಿ.ಜಿ.ಎಲ್ ಸ್ವಾಮಿಯವರ ಪುಸ್ತಕವಾದ ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ' ಎಂಬ ಪುಸ್ತಕವನ್ನು ಪರಿಚಯಿಸುತ್ತ ಮುಂದೆ ಸಾಗುತ್ತ ಪೆರು ನೆಲದ ಸ್ತ್ರೀ ಹೋರಾಟವನ್ನು ಗಂಭೀರವಾಗಿ ಚರ್ಚಿಸುತ್ತಾರೆ. ಸರ್ವಾಧಿಕಾರಿಯಾದ ತೊಲೆದೋ ವಿರುದ್ಧ ಸೆಟೆದೆದ್ದು ಅಧ್ಯಕ್ಷ ಸ್ಥಾನಕ್ಕೆ ಮಹಿಳೆ ಲೋರ್ಡೆ ಫ್ಲಾರೆಸ್ ಗೆದ್ದು ಬಂದ ಅವರ ಜೀವನಗಾಥೆಯನ್ನು ಇಲ್ಲಿ ಪ್ರಸ್ತುತ ಪಡಿಸುತ್ತಾರೆ. ಈಜಿಪ್ಟ್‌ನ ದೊರೆ ಪ್ಯೂಜಿಮೊರಿಯ ವಿರುದ್ಧ ಪತ್ನಿ ಸುಸಾನ್ ಅವರು ಚುನಾವಣೆಯಲ್ಲಿ ಗೆದ್ದು ಸರ್ವಾಧಿಕಾರಿಯನ್ನು ಹೋಗಲಾಡಿಸಿದ ಬಗೆಯನ್ನು ಅಧ್ಯಯನದಲ್ಲಿ ನೇಮಿಚಂದ್ರ ತಿಳಿಸಿಕೊಡುತ್ತಾರೆ. ಹಾಗೆಯೇ ಪೆರುವಿನ ಮಹಿಳಾ ಹೋರಾಟವನ್ನು ತಿಳಿಹೇಳುತ್ತ ಮಹಿಳಾ ಹೋರಾಟಗಾರ್ತಿ ಎಲಿನಾ ಅವರ ಆತ್ಮಚರಿತ್ರೆಯನ್ನು ಇಲ್ಲಿ ಮೆಲುಕು ಹಾಕುತ್ತಾರೆ.

ಪೆರುವಿನ ಪಕ್ಕದಲ್ಲಿದ್ದ ನಾಸ್ಕಾಗೆ ಬರುವ ಹಾದಿಯಲ್ಲಿ ಕಂದು ಬೆಟ್ಟದ ಮೇಲೆ ಕಾಣುವ ತ್ರಿಶೂಲದಾಕಾರದ ಬೃಹತ್ ಚಿತ್ರವನ್ನು ತಿಳಿಸುತ್ತ ಚಾರಿಯಟ್ಸ್ ಆಫ್ ದಿ ಗಾಡ್ಸ್ ಎಂಬ ಪುಸ್ತಕವನ್ನು ಕುರಿತು ಮಾತನಾಡುತ್ತಾರೆ ಲೇಖಕರು. ನಾಸ್ಕಾದ ಮರುಭೂಮಿಯಲ್ಲಿ ಕಂಡಂತಹ ದೈತ್ಯ ಚಿತ್ರಗಳು, ಹಾಗೂ ಪೆರುವಿನ ಮಾರುಕಟ್ಟೆಯಲ್ಲಿರುವ ನೇಯ್ಗೆಯ ನಿಪುಣತೆಯನ್ನು ಇಲ್ಲಿ ಹೇಳುತ್ತಾ ಸಾಗುತ್ತಾರೆ. ಚೌಚೀಲಾ ಸಮಾಧಿಗಳ ನಡುವೆ ಅಲೆದ ಅವರು ಮಮ್ಮಿಗಳ ಸಮಾಧಿಗಳ ಹತ್ತಿರ ಸಾಗಿ ಅವುಗಳನ್ನು ಅಧ್ಯಯನ ಮಾಡುತ್ತ ಹಾಗೆಯೇ ಈ ನೆಲದಲ್ಲಿ ಬರಡು ನೆಲದುದ್ದಕ್ಕೂ ಕಾಲುನಡಿಗೆಯಲ್ಲಿ ನಾಸ್ಕಾ ಚಿತ್ರಗಳ ಅಧ್ಯಯನ ಮಾಡಿದ ಡಾ. ಮರಿಯಾ ರೇಕಿಯನ್ನು ಇಲ್ಲಿ ನೆನಪಿಸಿ ಬರೆಯುತ್ತಾರೆ. ವಿಚಿತ್ರ

ಸಂಸ್ಕೃತಿಗೆ ಹೆಸರಾದ ಪೆರುವಿನಲ್ಲಿ ಶಿಶ್ನಗಳ ದೇಗುಲಗಳ ಬಗ್ಗೆ, ಇನ್ಕಾಪೂರ್ವ ಸಮಾಧಿಗಳನ್ನು ಗೈಡ್ ಮತ್ತು ಇಸ್ರೇಲ್ ಯುವಲೇಖಕನೊಡನೆ ಲೇಖಕಿಯ ಅಧ್ಯಯನದ ಅಲೆದಾಟ ಸಾಗುತ್ತದೆ. ಮರುಭೂಮಿಯಲ್ಲಿ ಅನೇಕ ವಿಚಿತ್ರ ಮನುಷ್ಯನ ಆಕಾರದ ಚಿತ್ರಗಳನ್ನು ಕಾಣಬಹುದೆಂದು ಲೇಖಕಿಯರು ಹೇಳುತ್ತಾರೆ. ಅವರ ಉಡುಪುಗಳಲ್ಲಿ ಬಳಸುವ ಜಾಮಿತಿ ಆಕಾರಗಳು ಮತ್ತು ಗ್ರಿಡ್ಸ್ ಇಲ್ಲಿ ವಿಭಿನ್ನ ಸಂಪ್ರದಾಯಗಳನ್ನು ಮೆಲುಕು ಹಾಕುತ್ತಾರೆ. ಪ್ರದೇಶದಿಂದ ಪ್ರದೇಶಕ್ಕೆ ವಿಮಾನ ಹಾರಾಟದ ಮೂಲಕ ಅಲ್ಲಲ್ಲಿ ಕಾಣುವ ಪಕ್ಷಿಗಳು, ತಿಮಿಂಗಿಲ, ಹೆದ್ದಾರಿಗಳು, ಜೇಡರಹುಳ, ಚಿನ್ನದ ಅದುರನ್ನು ಪುಡಿ ಮಾಡುವ ಕಲೆಯನ್ನು, ಹಾಗೂ ಓರಿಯನ್ ನಕ್ಷತ್ರ ಪುಂಜವನ್ನು ತಿಳಿಹೇಳುತ್ತ ಹೀಗೆ ಲೇಖಕಿ ವೈವಿಧ್ಯತೆಯನ್ನು ಪ್ರಸ್ತುತಪಡಿಸುತ್ತಾರೆ. ಅರಿಕೀಪಾ ನಗರದ ಜ್ವಾಲಾಮುಖಿಗಳಲ್ಲಿ ಒಂದು ಚಚಾನಿಯನ್ನು ಇಲ್ಲಿ ನೋಡಿದ ಅನುಭವವನ್ನು ತಿಳಿಸಿಕೊಡುತ್ತಾರೆ. 1612 ರಲ್ಲಿ ಕಟ್ಟಿದ ಕ್ಯಾಥೆಡ್ರೆಲ್‌ನ ಸುಂದರ ಗೋಪುರಗಳ ಪರಿಚಯ ಮಾಡಿಕೊಡುತ್ತಾ ಕುಸ್ಕೋದ ವಿಶಿಷ್ಟ ಸಂಸ್ಕೃತಿಯನ್ನು ನಮ್ಮ ಕಣ್ಣೆದುರಿಗಿಡುತ್ತಾರೆ. ಚಿಂಚೇರಾ ಮಾರುಕಟ್ಟೆ, ಮೃದುವಾದ ಉಣ್ಣೆಯ ನೀಡುವ ಅಲ್ಪಾಕಾ ಪ್ರಾಣಿಗಳು, ಲಾಮಾ ಪ್ರಾಣಿಗಳು, ಬೆಟ್ಟಗಳಲ್ಲಿ ನಿರ್ಮಿಸಿದ ರಸ್ತೆಗಳು, ವ್ಯವಸಾಯಕ್ಕಾಗಿ ಇನ್ಕಾ ಟೆರೇಸಸ್‌ಗಳು, ಬರುಡೆಯ ಮೇಲೆ ದೇವರ ಚಿತ್ರ, ಕುಂಡಗಳ ಅಲಂಕರಿಸುವ ಚಿತ್ರಗಳು ಮುಂತಾದ ವಿಚಿತ್ರವಾದ ಸಂಸ್ಕಾರಗಳನ್ನು, ಪದ್ಧತಿಗಳನ್ನು ಇಲ್ಲಿ ತಿಳಿಸುತ್ತಾರೆ. ಓಲಂತಾಯ್ ತೋಂಬೋದ ಸೂರ್ಯದೇವಾಲಯದ ಅವಶೇಷಗಳನ್ನು ಅಧ್ಯಯನ ಮಾಡುತ್ತಾರೆ ಲೇಖಕಿ ನೇಮಿಚಂದ್ರರವರು.

ರಕ್ತದಲ್ಲಿ ಬರೆದ ಚರಿತ್ರೆಯ ಒಂದು ಲೇಖನದಲ್ಲಿ ಲೇಖಕಿಯರು ಅಲ್ಲಿಯ ಪಿಜಾರೋವಿನ ದುರಂತ ಕಥೆಯನ್ನು ವಿಭಿನ್ನವಾಗಿ ಚಿತ್ರಿಸಿದ್ದಾರೆ. ಇನ್ಕಾ ಸಾಮ್ರಾಟ ಅತಹುಲ್ಪಾ, ಹಾಗೂ ಸ್ಪೇನ್ ದೇಶದ ಪಿಜಾರೋ ಇನ್ಕಾ ಸಾಮ್ರಾಜ್ಯವನ್ನು ಧ್ವಂಸ ಮಾಡಿದ ಘಟನೆಗಳನ್ನು ಹಾಗೂ ಮಾಚುಪಿಚುವಿನ ವಾಸ್ತವ ಚಿತ್ರಗಳನ್ನು ಲೇಖಕಿ ತಮ್ಮ ಪ್ರವಾಸ ಕಥನದಲ್ಲಿ ಹೇಳುತ್ತಾ ಸಾಗುತ್ತಾರೆ. ಅಮೆಜಾನ್ ತಟದಲ್ಲಿರುವ ಅನೇಕ ಕಾಡು ದ್ವೀಪಗಳನ್ನು, ಲಾರ್ಡ್ ಆಫ್ ಸೈಪನ್ ಗೋರಿಯಲ್ಲಿ ದೊರೆತ ಚಿನ್ನದ ಆಭರಣಗಳು, ಮಹಾನದಿ ಅಮೆಜಾನ್‌ನನ್ನು ಅಮರು ಮಾಯು ಅಂದರೆ ಮಹಾಸರ್ಪಮಾತೆ ಎಂದು ಪೂಜಿಸುತ್ತಾರೆ ಇಲ್ಲಿಯ ಜನರೆಂದು ಇಲ್ಲಿ ಮೆಲುಕು ಹಾಕುತ್ತಾರೆ ಲೇಖಕಿ. ಬ್ರೆಜಿಲ್ ನೆಲಕ್ಕೆ ಭೇಟಿ ನೀಡುತ್ತ ವಿಶಿಷ್ಟವಾದ ಅಲ್ಲಿಯ ದೋಣಿ ತವತಿಂಗ, ಕೊಲಂಬಿಯಾ ಬೀದಿ ಬದಿಯ ಹೋಟೆಲ್, ಸ್ಪೇನ್ ದೇಶದ ಹುಡುಗಿಯರ ಒಡನಾಡ, ವಿಕ್ಟೋರಿಯಾ ಅಮೆಜಾನಿಕದಲ್ಲಿಯ ಕಾಡುವಾಸಿ ಜನರ ನಡುವೆ ಹಂಚಿಕೊಂಡ ಆನೆಕೊಂಡ, ಸ್ಲಾತ್ ಮಾಂಸದ ಪ್ರಾಣಿಗಳು, ವಾಟರ್ ಲಿಲಿ, ಕಾಡಿನ ಬೀಜಗಳಿಂದ ಕಡ್ಡಿಗಳಿಂದ ಮಾಡಿದ ಹಾರಗಳನ್ನು ಇಲ್ಲಿ ವಿಶಿಷ್ಟತೆಯನ್ನು ಪ್ರತಿಬಿಂಬಿಸುತ್ತವೆಂದು ಲೇಖಕಿ ತಮ್ಮ ವಿಭಿನ್ನ ಅನಿಸಿಕೆಗಳನ್ನು ಪುಸ್ತಕದಲ್ಲಿ ಹಂಚಿಕೊಂಡಿದ್ದಾರೆ.

ಕೊನೆಯದಾಗಿ ಪೆರುವನ್ನು ಮತ್ತೊಮ್ಮೆ ಮೆಲುಕು ಹಾಕುತ್ತ ಲೇಖಕಿ ನೇಮಿಚಂದ್ರರವರು ಅಲ್ಲಿಯ ಮುಗಿಲು ಮುಟ್ಟಿದ ಗಗನ ಚುಂಬಿಗಳು, ಕತ್ತರಿಸಿದ ಹುಲ್ಲುಗಾವಲುಗಳು, ನೇರ ರಸ್ತೆಗಳು, ಮೈಲಿಯುದ್ದದ ಮಾಲುಗಳು, ಐಷಾರಾಮದ ಪರಮಾವಧಿಗಳು, ಎಲ್ಲ ಊರು, ರಸ್ತೆ ಒಂದೇ ತರಹ ಕಾಣುತ್ತಿದ್ದ ನೆನಪುಗಳು, ಆ ಪುರಾತನ ಸಂಸ್ಕೃತಿಯ ತೊಟ್ಟಿಲಲ್ಲಿ ಎಷ್ಟೆಲ್ಲಾ ಅದ್ಭುತಗಳು ಎಂದು ಹೇಳುವ ಲೇಖಕಿ ಇನ್ನು ಸಂಶೋಧನೆಗಳು ಅತ್ಯವಶ್ಯಕವಾಗಿ ಇಲ್ಲಿ ಕಾಣಬೇಕಾಗಿದೆ.

ಹುಟ್ಟುಹಾಕಬೇಕಾಗಿದೆ ಎಂದು ಹೇಳುವ ನೇಮಿಚಂದ್ರರು ಹೆಜ್ಜೆ ಹೆಜ್ಜೆಗೂ ಅವರ ಅಕ್ಷರಗಳ ಮೂಲಕ ಪೆರುವಿನ ಕಣಿವೆಯಲ್ಲಿ ನಮ್ಮನ್ನು ಜಾರಿಸಿ ಬಿಟ್ಟಿದ್ದಾರೆ ಎನ್ನುವ ಮಾತುಗಳು. ಇಲ್ಲಿ ಇತಿಹಾಸ ಮರುಕಳಿಸುವಂತೆ ಮಾಡಿದ್ದಾರೆ, ಹೊಸ ರೀತಿಯ

ವಿಭಿನ್ನ ಶೈಲಿಯಲ್ಲಿ ಪ್ರವಾಸ ಕಥನದ ಮೂಲಕ ಮೈಲಿಗಲ್ಲಾಗಬೇಕಾದ ಗಟ್ಟಿತನದ ಭಾಷಾ ಪ್ರಬುದ್ಧತೆಯನ್ನು ಇಲ್ಲಿ ಮೆರೆದಿದ್ದಾರೆಂದರೆ ತಪ್ಪಾಗಲಾರದು. ಇದೊಂದು ಅಚ್ಚಳಿಯದ ಪ್ರವಾಸ ಕಥನ, ಆ ಕಣಿವೆಯ ಬೆಟ್ಟದ ಪೆರು, ಬೆಟ್ಟ, ಗುಡ್ಡ ಕಾಡು, ಮರಳುಗಾಡು, ಅಮೆಜಾನ್ ಮಳೆಕಾಡು, ಹೀಗೆ ನಾನಾ ರೀತಿಯಲ್ಲಿ ಮೂಲೆಮೂಲೆ ಯಲ್ಲಿ ಅಲೆದಾಡುತ್ತ ವಿಶಿಷ್ಟ ನಾಡಿನ ಸಂಸ್ಕೃತಿಯನ್ನು ಇಡೀ ಪ್ರಪಂಚಕ್ಕೆ ಮಾಡಿಕೊಟ್ಟಿದ್ದು ನಾವೆಲ್ಲರೂ ಮೆಚ್ಚಲೆಬೇಕಾದಂತ ಕಾರ್ಯ. ಇಂತಹ ಪೆರುವನ್ನು ಕುರಿತು ಬರೆದ ಪ್ರವಾಸ ಕಥನವಾದ 'ಪೆರುವಿನ ಪವಿತ್ರ ಕಣಿವೆ' ಕೃತಿಯು ಕನ್ನಡ ಸಾಹಿತ್ಯಕ್ಕೆ ಉತ್ತಮ ಕೊಡುಗೆ ಎಂದರೆ ತಪ್ಪಾಗಲಾರದು.

**ಆಕರ ಗ್ರಂಥ**


- ನೇಮಿಚಂದ್ರ. (2016). *ಪೆರುವಿನ ಪವಿತ್ರ ಕಣಿವೆಯಲ್ಲಿ.* ನವಕರ್ನಾಟಕ ಪ್ರಕಾಶನ.